ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ರಾಜನರ್ತಕಿ ಮೈನಾಬಾಯಿ

ಭಾಗ ೧

ಡಾ. ಶೈಲಜಾ ಆಮೂರ



**ಸ್ವಾ**ಮಿ ವಿವೇಕಾನಂದರು ಖೇತ್ರಿಯಲ್ಲಿದ್ದಾಗ ನಡೆದ ಈ ಒಂದು ಪ್ರಸಂಗ ಅವರ ಜೀವನದಲ್ಲಿಯೇ ಸರ್ವಾಧಿಕ ಮಹತ್ವ ಪೂರ್ಣ ಘಟನೆ ಎಂದು ಪರಿಗಣಿಸಬಹುದು. ಸ್ವಾಮೀಜಿ ಈ ಘಟನೆಗೆ ಮೊದಲು ಎಷ್ಟೋ ಜನ ದೀನ, ದುರ್ಬಲರನ್ನು ಅತ್ಯಂತ ಸನಿಹದಿಂದ ನೋಡುವುದಷ್ಟೇ ಅಲ್ಲ ಅವರೊಂದಿಗೆ ತಾವೂ ವಾಸಮಾಡಿ, ಅವರ ಜತೆಯಲ್ಲಿಯೇ ಊಟ ಮಾಡಿ, ಅವರೊಂದಿಗೆ ಸಂವೇದನಾಶೀಲ ಸಹಾನುಭೂತಿಯ ಜೀವನ ವನ್ನು ಯಶಸ್ವಿಯಾಗಿ ಸಾಗಿಸಿದ್ದರೂ, ಈ ಒಂದು ಘಟನೆ ಜೀವ ನದ ಬಗೆಗೆ ಅವರಿಗಿದ್ದ ದೃಷ್ಟಿಕೋನವನ್ನೇ ಬದಲಾಯಿಸಿತ್ತು. ವಿಭಿನ್ನ ಲೇಖಕರು ಈ ಘಟನೆಯ ಬಗ್ಗೆ ಸಾಕಷ್ಟು ವಿವರವಾಗಿ ಬರೆದಿದ್ದಾರೆ. ಹಾಗಾದರೆ ಅಷ್ಟೊಂದು ಕುತೂಹಲಕಾರಿಯಾದ ಈ ಸಂಗತಿಯಾದರೂ ಏನು? ನಡೆದದ್ದು ಎಲ್ಲಿ ಹಾಗೂ ಯಾರ ಸಮ್ಮುಖದಲ್ಲಿ? ಈ ಎಲ್ಲ ವಿವರಗಳಿಗೆ ಉತ್ತರ ಸೂರದಾಸರ ಮರ್ಮಸ್ಪರ್ಶಿಯಾದ ಒಂದು ಭಜನೆ – **'ಪ್ರಭುಜೀ ಮೇರೆ ಅವಗುಣ ಚಿತ್ ನ ಧರೊ...'**

ಈ ಕುರಿತಾಗಿ ಉಲ್ಲೇಖ ಮಾಡಿದ ಹಲವಾರು ಜನರಲ್ಲಿ ಬಂಗಾಳಿ ನಾಟಕ ಸಾಮ್ರಾಟನೆಂದೇ ಪ್ರಸಿದ್ಧನಾಗಿದ್ದ ಗಿರೀಶ ಚಂದ್ರ ಘೋಷ ಮೊದಲನೆಯವನು. ನಂತರ ಸ್ವಾಮಿ ವಿರಜಾ ನಂದ, ಸೋದರಿ ನಿವೇದಿತಾ, ಕ್ರಿಸ್ಟೀನ್, ಪಂಡಿತ ಜಬರಮಲ್ ಶರ್ಮಾ, ವೇಣಿಶಂಕರ ಶರ್ಮಾ, ರೋಮಾ ರೋಲಾ ಹಾಗೂ ಸ್ವಾಮಿ ಗಂಭೀರಾನಂದಜಿ ಮೊದಲಾದವರು ವಿವರಣೆಗಳನ್ನು ನೀಡಿದ್ದಾರೆ.

ಸ್ವಾಮಿ ವಿವೇಕಾನಂದರ ಅಂತರಂಗದ ಮಿತ್ರರಲ್ಲಿ ಒಬ್ಬ ನಾಗಿದ್ದ ಗಿರೀಶಚಂದ್ರ ಘೋಷ್ ಈ ಘಟನೆಯ ಕುರಿತಾಗಿ ಸ್ವಾಮೀಜಿಯವರ ಮುಖದಿಂದಲೇ ಕೇಳಿದ್ದನಲ್ಲದೆ ೧೯೧೦ ನೆಯ ಇಸವಿಯಲ್ಲಿ ನಡೆಯಲಿದ್ದ ಒಂದು ಸಭೆಯಲ್ಲಿ ಈ ಕುರಿ ತಾಗಿ ವಿವರಣೆ ಮಾಡಲು ಟಿಪ್ಪಣಿಯನ್ನೂ ಬರೆದುಕೊಂಡಿದ್ದ. ವಾರಾಣಸಿಯ 'ರಾಮಕೃಷ್ಣ ಅದ್ವೈತಾಶ್ರಮ'ದಲ್ಲಿ ೧೯೧೦ರ ಜನವರಿ ೨೧ರಂದು ಇಸವಿಯಲ್ಲಿ ಮಂಡಿಸಬೇಕಾಗಿದ್ದ 'ವಿವೇ ಕಾನಂದರ ಸಾಧನೆಗಳ ಫಲ' ('ವಿವೇಕಾನಂದ ಕೀ ಸಾಧನಾ ಫಲ') ಎಂಬ ನಿಬಂಧದಲ್ಲಿ ಈ ವಿಷಯವಾಗಿ ಈ ರೀತಿ ಬರೆದಿ ದ್ದಾನೆ:

''ಅಭಿಮಾನ ಅದೆಷ್ಟು ಆಟವಾಡಿಸುತ್ತದೆ, ಈ ವಿಷಯ ವನ್ನು ಕುರಿತಾಗಿ ನಮಗೆ ತಿಳಿಸಲು ಅವರು (ಸ್ವಾಮಿ ವಿವೇಕಾ ನಂದ) ನಮ್ಮೊಂದಿಗೆ ಒಂದು ಘಟನೆಯನ್ನು ಹಂಚಿಕೊಂಡರು. ಅವರು ಖೇತ್ರಿ ರಾಜನ ಅತಿಥಿಯಾಗಿ ಅರಮನೆಯಲ್ಲಿ ವಾಸಿಸು ತ್ತಿದ್ದರು. ಒಂದು ದಿನ, ಮಹಾರಾಜ ಒಬ್ಬ ಪ್ರೌಢ ವಯಸ್ಸಿನ ಗಾಯಕಿಯನ್ನು ಸಂಗೀತ ಕಛೇರಿ ನಡೆಸುವುದಕ್ಕಾಗಿ ಕರೆಸಿದ್ದರು. ಆ ವೇಳೆಗೆ ಸ್ವಾಮೀಜಿ ಕೂಡ ರಾಜನೊಂದಿಗೆ ಕುಳಿತಿದ್ದರು. ಸ್ವಾಮೀಜಿ ಯೋಚಿಸತೊಡಗಿದರು, 'ಸ್ತ್ರೀಯರ ಹಾಡುಗಳನ್ನು

ನಾನೆಂದಿಗೂ ಕೇಳುವುದಿಲ್ಲ. ಸಂಗೀತದ ವ್ಯವಸಾಯದಲ್ಲಿ ನಿರತರಾಗಿರುವ ಹೆಣ್ಣುಮಕ್ಕಳು ಅದೆಷ್ಟು ಸಚ್ಚಾರಿತ್ರ್ಯ ಹೊಂದಿ ಬದುಕುತ್ತಿರುತ್ತಾರೆ? (ಅಂದಿನ ದಿನಗಳಲ್ಲಿ ನಾಟ್ಯಗಾಯನಗಳನ್ನೇ ತಮ್ಮ ವೃತ್ತಿಯಾಗಿರಿಸಿಕೊಂಡ ಸ್ತ್ರೀಯರನ್ನು ಸಮಾಜ ಬಹಳ ಕೀಳು ದೃಷ್ಟಿಯಿಂದ ಕಾಣುತ್ತಿತ್ತು. ಎಷ್ಟೋ ಸಾರಿ ಅವರು ವೇಶ್ಯೆಯರಂತೆ ಬದುಕಬೇಕಾಗುತ್ತಿತ್ತು.) ನಾನು ಇಲ್ಲಿಂದ ಹೋಗುವುದೇ ಉಚಿತ' ಎಂದು ಹೊರಡಲನುವಾದರು. ಆಗ ಖೇತ್ರಿರಾಜ ಅಜಿತ್ ಸಿಂಗ್, ಸ್ವಾಮೀಜಿಯವರಿಗೆ ಕೈಮುಗಿದು, 'ದಯವಿಟ್ಟು ಕೆಲವು ಭಜನೆಗಳನ್ನು ಆಲಿಸಿ' ಎಂದು ವಿಶೇಷವಾಗಿ ಅನುರೋಧಿಸಿದ. ಆಗ ಸ್ವಾಮೀಜಿ, 'ರಾಜ ಈ ರೀತಿ ಪರಿಪರಿಯಾಗಿ ಕೇಳಿಕೊಳ್ಳುತ್ತಿರುವಾಗ ನಾನು ಹೊರಡುವುದು ಉಚಿತವಲ್ಲ, ಒಂದು ಹಾಡು ಕೇಳಿ ಹೊರಟರಾಯಿತು' ಎಂದು ಯೋಚಿಸಿ ಮತ್ತೆ ಕುಳಿತುಕೊಂಡರು. ಗಾಯಕಿ ತನ್ನ ಗಾನವನ್ನು ಪ್ರಾರಂಭಿಸಿದಳು''

**ಪ್ರಭು ಮೇರೇ ಅವಗುಣ ಚಿತ ನ ಧರೋ**
**ಸಮದರ್ಶಿ ಹೈ ನಾಮ ತಿಹಾರೋ**
**ಚಾಹೊ ತೊ ಪಾರಕರೋ**
**(ಪ್ರಭುವೇ ನನ್ನಯ ಅವಗುಣ ಗಣಿಸದಿರು**
**ಸಮದರ್ಶಿ ಎಂಬ ನಾಮವು ನಿನಗಿರೆ**
**ಪಾರಗಾಣಿಸು ನನ್ನನ್ನು ನೀ ಬಯಸಿದರೆ ...)**

''ಭಜನೆಯನ್ನು ಆಲಿಸುತ್ತಿದ್ದ ಸ್ವಾಮೀಜಿ ಅದರ ಭಾವವನ್ನು ತಮ್ಮ ಮನಸ್ಸಿನಲ್ಲಿಯೇ ವಿಶ್ಲೇಷಿಸತೊಡಗಿದರು: 'ಪ್ರಭು ನೀನು ಯಾರದ್ದೂ ದೋಷವನ್ನಾಗಲಿ ಗುಣವನ್ನಾಗಲಿ ಎಂದಿಗೂ ವಿಮರ್ಶಿಸುವುದಿಲ್ಲ. ಗಂಗೆಯನ್ನು ಸೇರುವ ಅಪವಿತ್ರ ಜಲ ಕೂಡ ಪವಿತ್ರ ಗಂಗಾಜಲವಾಗಿ ಮಾರ್ಪಾಡಾಗುತ್ತದೆ. ಇಂದಿಗೂ ನನ್ನ ಅಂತರಾಳದಲ್ಲಿ ನಾನು ಒಬ್ಬ ಸಂನ್ಯಾಸಿ, ಅವಳೋ ಕೇವಲ ಒಬ್ಬ ಹಾಡುಗಾರ್ತಿ ಎಂಬ ಭಾವ ಜಾಗೃತವಾಗಿಯೇ ಇದೆಯಲ್ಲ! ಇದೇ ಏನು ನನ್ನ ಸಂನ್ಯಾಸ? ನನಗೆ ಇವತ್ತಿಗೂ ವಿಶ್ವವ್ಯಾಪಿನಿಯಾಗಿರುವ ಜಗದಂಬೆಯ ದರ್ಶನವಾಗಿಲ್ಲ.'

''ಅಂದಿನಿಂದ ಅವರು ಗಾಯಕಿಯನ್ನು 'ಅಮ್ಮಾ' ಎಂದು ಸಂಬೋಧಿಸತೊಡಗಿದರು ಹಾಗೂ ಯಾವಾಗ ಖೇತ್ರಿಯ ರಾಜಭವನಕ್ಕೆ ಹೋಗುತ್ತಿದ್ದರೋ ಆಗ ಅವಳನ್ನು ಕರೆಸಿ ಭಜನೆಗಳನ್ನು ಆಲಿಸುತ್ತಿದ್ದರು. ಸ್ವಾಮೀಜಿ ಅವಳನ್ನು 'ಅಮ್ಮಾ' ಎಂದು ಸಂಬೋಧಿಸಿದಾಗ ಅವರಲ್ಲಿಯ ಮಾತೃಭಾವ ಜಾಗೃತವಾಗಿ, ಅವಳೂ ಸಹ ಅವರನ್ನು ತನ್ನ ಮಗುವಿನಂತೆಯೇ ನೋಡತೊಡಗಿದಳು.

''ಈ ಘಟನೆ ಸಾಧಕನಾದವನು ಅಭಿಮಾನಿಯಾಗಿದ್ದಲ್ಲಿ ಅವನಿಗೆ ಅಂಕುಶಪ್ರಾಯವಾಗಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಈಶ್ವರನು ಯಾರನ್ನು ಯಾವ ಮಾರ್ಗದಲ್ಲಿ ನಡೆಯುವಂತೆ ಮಾಡುವನೋ, ಇದೆಲ್ಲ ಮಾನವ ಬುದ್ಧಿಗೆ ಮೀರಿದ ಜ್ಞಾನವಾಗಿದೆ. ಯುವತಿಯಾಗಿದ್ದ ಗಾಯಕಿಯನ್ನು ಕಂಡು ಅವಳು ನರಕಕ್ಕೆ ಎಳೆಯುವ ಸಾಧನ ಎಂದು ಅವರನ್ನು ತುಚ್ಛವಾಗಿ ಕಂಡಿದ್ದರೆ ಅದು ಬರೀ ಭ್ರಾಂತಿಯಾಗಿರುತ್ತಿತ್ತು. ಎಲ್ಲದಕ್ಕೂ ಈಶ್ವರ ಕೃಪೆಯೇ ಮೂಲವಾಗಿದೆ. ಸಾಮಾನ್ಯ ಹಾಡುಗಾರ್ತಿಯೊಬ್ಬಳು ನಿರಾಯಾಸವಾಗಿ ವಾತ್ಸಲ್ಯಮಯ ಪ್ರೀತಿಯ ಅಧಿಕಾರಿಣಿಯಾಗಿ ಬದಲಾಯಿಸಿದ್ದಳು.''

ಮೇಲಿನ ವಿವರಣೆಯನ್ನು ಗಿರೀಶಚಂದ್ರ ಘೋಷರು ಮಂಡಿಸಿದ ಮೇಲೆ ಹಲವಾರು ಇತರ ಭಕ್ತರು ಸ್ವಾಮೀಜಿಯವರೊಂದಿಗೆ ಖೇತ್ರಿಯಲ್ಲಿ ಆಗ ಇದ್ದವರು, ಅಂದಿನ ಸಮಕಾಲೀನ ವಿದ್ವಾಂಸರು, ಪಂಡಿತರು ಈ ಬಗ್ಗೆ ಹೆಚ್ಚು ಹೆಚ್ಚು ನಿಜಾಂಶಗಳನ್ನು ತಿಳಿಯಲು ಕಾತರರಾದರು. ಬಿಕಾನೇರಿನ ಶ್ರೀ ಧನ್ನಾರಾಮ ರಾಜಪುರೋಹಿತ ಎಂಬ ಮಹನೀಯರು ವೃದ್ಧಾವಸ್ಥೆಯಲ್ಲಿದ್ದ ಗಾಯಕಿ ಹಾಗೂ ನರ್ತಕಿಯಾಗಿದ್ದ ಮೈನಾಬಾಯಿಯನ್ನು ಭೇಟಿಮಾಡಿ, ಅವಳಿಂದ ಸಾಧ್ಯವಾದಷ್ಟು ವಿವರಗಳನ್ನು ಪಡೆದು ಅದನ್ನು ಹಿಂದೀ ಪತ್ರಿಕೆಯಲ್ಲಿಯೂ ಪ್ರಕಟಿಸಿದರು.

ರಾಜದರ್ಬಾರಿನ ಪುಸ್ತಕದಲ್ಲಿ ದಾಖಲಿಸಲಾದ ಟಿಪ್ಪಣಿಯ ಮೂಲಕ ತಿಳಿದುಬಂದ ವಿಷಯವೆಂದರೆ, ಈ ಘಟನೆ ೧೮೯೧ರ ಆಗಸ್ಟ್ ೯ನೆ ತಾರೀಖು ಜರುಗಿತ್ತು ಎಂಬುದು. ಅಂದಿನ ಎಲ್ಲ ಕಲಾವಿದೆಯರಲ್ಲಿ ಹೆಚ್ಚಿನ ಮನ್ನಣೆಗೆ ಪಾತ್ರಳಾಗಿದ್ದ ಈ ನರ್ತಕಿ ಹಾಗೂ ಗಾಯಕಿಯ ಹೆಸರು 'ಮೈನಾ ಬಾಯಿ'.

ಆ ದಿನಗಳಲ್ಲಿ ಪತ್ರಕರ್ತ ಹಾಗೂ ಹಿಂದೀ ವಿದ್ವಾಂಸರೆಂಬ ಖ್ಯಾತಿ ಪಡೆದಿದ್ದ ಪಂಡಿತ ಜಬರಮಲ್ ಶರ್ಮಾ ಎಂಬ ರಾಜಸ್ಥಾನದ ಗಣ್ಯವ್ಯಕ್ತಿ ತಮ್ಮ ಒಂದು ಲೇಖನದಲ್ಲಿ, ''ಹೇಗೆ ಬುದ್ಧ ಭಗವಾನನು ಬೋಧನೆಯಲ್ಲಿ ನಿರ್ವಾಣದ ಹಂತವನ್ನು ತಲುಪಿದನೋ ಹಾಗೆ ಸ್ವಾಮಿ ವಿವೇಕಾನಂದರು ಖೇತ್ರಿಯಲ್ಲಿ ಎಲ್ಲ ಬಗೆಯ ಬಂಧನಗಳನ್ನು ಬಿಚ್ಚಿ ಬಿಸಾಕಿ ಬುದ್ಧತ್ವವನ್ನು ದೊರಕಿಸಿಡರು, ಮಾತ್ರವಲ್ಲದೆ ಆ ನರ್ತಕಿ ಕೂಡ ಏನೋ ಒಂದು ದೈವೀ ಕರೆಯ ಆಹ್ವಾನಕ್ಕೆ ಸೋತು ಶರಣಾಗಿ, ಯಾವುದೋ ವಿಶೇಷ ಸ್ಫೂರ್ತಿಯ ಸೆಲೆ ತನ್ನ ಎದೆಯಲ್ಲಿ ಉಂಟಾಯಿತು ಎಂದು ತನ್ನ ವ್ಯಕ್ತಿತ್ವವನ್ನೇ ಸಂಪೂರ್ಣವಾಗಿ ಬದಲಾಯಿಸಿಕೊಂಡಳು'' ಎಂದು ಉಲ್ಲೇಖಿಸಿದ್ದಾರೆ. ಡಾಕ್ಟರ್ ತ್ರೈಲೋಕ್ಯನಾಥ ವಜ್ರವಾಲ ಎಂಬುವವರು ''ಸ್ವಾಮೀಜಿಯವರು ಅದ್ವೈತದಲ್ಲಿ ಪರಿಪೂರ್ಣತ್ವವನ್ನು ಪಡೆದದ್ದು ಖೇತ್ರಿಯಲ್ಲಿ. ಅಂದಿನಿಂದ ಅವರು ಪ್ರತಿ ಜೀವಿಯಲ್ಲಿಯೂ ಪರಮಾತ್ಮನ ಇರವನ್ನು ಗ್ರಹಿಸಲು ಸಮರ್ಥರಾದರು. ಅವರು ಈ ಉನ್ನತ ಮನಃಸ್ಥಿತಿಯನ್ನು ತಲುಪಲು ಮೈನಾಬಾಯಿ ಕೂಡ ಒಂದು ಸಹಾಯವಾದಳು'' ಎಂದು ಬರೆದಿದ್ದಾರೆ.

ಮೈನಾಬಾಯಿ ಅನೇಕ ಸದ್ಗುಣಗಳನ್ನು ಹೊಂದಿದವಳಾಗಿದ್ದಳು. ಅವಳ ಗಾಯನವನ್ನು ಕೇಳುತ್ತಿದ್ದಂತೆ ಕೇಳುಗರಲ್ಲಿ ಏನೋ ಎಂದು ದೈವೀ ಆನಂದದ ಅನುಭವವಾಗುತ್ತಿತ್ತು. ಅವಳ ಹಾಡುಗಳು ಅದೆಷ್ಟು ಪ್ರಸಿದ್ಧವಾಗಿದ್ದವೆಂದರೆ ಅವುಗಳನ್ನು ಆಲಿಸಿ

ದವರು ತಾವೂ ಮತ್ತೆ ಮತ್ತೆ ಅವುಗಳನ್ನು ತಮ್ಮಷ್ಟಕ್ಕೆ ತಾವೇ ಹಾಡಿಕೊಳ್ಳುತ್ತಾ ಮೈಮರೆಯುತ್ತಿದ್ದರು.

ಮೈನಾಬಾಯಿ ಚಿಕ್ಕ ಮಗುವಿದ್ದಾಗಲೇ ಅವಳ ತಂದೆತಾಯಿಯರು ತೀರಿಹೋದರು. ಅಸಹಾಯಕ ಹಾಗೂ ಅನಾಥ ಮಗುವನ್ನು ಕೇರಾಮತಿ ಬೈಜಿ ಎನ್ನುವವಳು ತನ್ನ ಮನೆಯಲ್ಲಿ ಆಸರೆ ನೀಡಿ ಸಾಕತೊಡಗಿದಳು. ಅವಳ ಮನೆ ಜೈಪುರದ ಚಾಂದಪೋಲ ಬಜಾರಿನಲ್ಲಿತ್ತು. ಕೇರಾಮತಿ ಬಾಯಿ ಮಗು ಮೈನಾಬಾಯಿಯನ್ನು ಜೋಧಪುರದ ಅರಮನೆಗೆ ರಾಜನರ್ತಕಿಯಾಗಿ ಸೇವೆ ಸಲ್ಲಿಸಲು ಜೋಧಪುರಕ್ಕೆ ರವಾನಿಸಿದಳು. ಆ ವೇಳೆಯಲ್ಲಿ ಆರ್ಯ ಸಮಾಜದ ಸ್ಥಾಪಕರಾಗಿದ್ದ ದಯಾನಂದ ಸರಸ್ವತಿಯವರು ಜೋಧಪುರದ ಅರಮನೆಯಲ್ಲಿ ರಾಜಗುರುವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು ಮೈನಾಬಾಯಿಯನ್ನು ಅರಮನೆಯಲ್ಲಿ ಇಟ್ಟುಕೊಳ್ಳುವುದಕ್ಕಾಗಲೀ ಅವಳನ್ನು ನರ್ತಕಿಯಾಗಿ ನಿಯಮಿಸುವುದಕ್ಕಾಗಲೀ ಸಮ್ಮತಿ ನೀಡಲಿಲ್ಲ. ಜೋಧಪುರದ ಅರಮನೆಯಲ್ಲಿದ್ದ ಒಬ್ಬ ಶ್ರೀಮಂತ ಕಲಾವಿದ ಮೈನಾಬಾಯಿಯ ಅತ್ಯುತ್ತಮ ಕಲೆಯನ್ನು ಗ್ರಹಿಸಿ ಅವಳನ್ನು ತನ್ನ ಸ್ನೇಹಿತನಾಗಿದ್ದ ಖೇತ್ರಿಯ ರಾಜ ಅಜಿತಸಿಂಗ್ ರಾಜ್ಯಕ್ಕೆ ಕಳುಹಿಸಿಕೊಟ್ಟರು. ರಾಜಾ ಅಜಿತಸಿಂಗ್ ಸ್ವತಃ ಸಂಗೀತಪ್ರೇಮಿ. ಅವನು ಉತ್ತಮ ಸಿತಾರ್ ವಾದಕನಾಗಿದ್ದನಲ್ಲದೆ ತಾನೇ ಕವನಗಳನ್ನು ರಚಿಸಿ ಹಾಡುತ್ತಿದ್ದ. ಮೈನಾಬಾಯಿಯನ್ನು ನೋಡಿದ ಮೊದಲನೆಯ ದಿನವೇ ಅವನಿಗೆ ಅವಳ ವಿದ್ವತ್ತಿನ ಅರಿವಾಗಿ, ಅವಳನ್ನು ತನ್ನ ಆಸ್ಥಾನದ ಸಂಗೀತಗಾರ್ತಿಯನ್ನಾಗಿ ನಿಯಮಿಸಿದ. ಅವಳಿಗೆ ಖೇತ್ರಿಯಲ್ಲಿ ವಾಸಿಸಲು ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಟ್ಟ.

ರಾಜಸ್ಥಾನದ ಅಂದಿನ ಸಂಪ್ರದಾಯದಂತೆ ರಾಜಸಭೆಯ ಎಲ್ಲ ಕಾರ್ಯಗಳೂ ನರ್ತಕಿಯರ ನಾಟ್ಯ, ಶಂಖ ಊದುವುದು ಮತ್ತು ಪ್ರಾರ್ಥನೆಗಳ ತರುವಾಯ ಪ್ರಾರಂಭವಾಗುತ್ತಿದ್ದವು. ಅವರಿಗೆಲ್ಲ ರಾಜನ ಬೊಕ್ಕಸದಿಂದ ವೇತನ ದೊರೆಯುತ್ತಿತ್ತು. ಖೇತ್ರಿಯ ರಾಜನ ರಾಜಸಭೆಯಲ್ಲಿ ಸಂಗೀತಗಾರರ ತಂಡದಲ್ಲಿ ಮೈನಾಬಾಯಿ, ಭಾಮರೀಬಾಯಿ ಮತ್ತು ಜಾನಕೀಬಾಯಿ ಎನ್ನುವವರು ಹೆಸರುವಾಸಿಯಾಗಿದ್ದರು.

೧೮೯೩ನೆಯ ಇಸವಿಯಲ್ಲಿ ಸ್ವಾಮೀಜಿ, ಎರಡನೆಯ ಬಾರಿ ಖೇತ್ರಿಗೆ ರಾಜಕುಮಾರ ಜಯಸಿಂಗ್‌ನ ಹುಟ್ಟುಹಬ್ಬದ ಆಚರಣೆಗಾಗಿ ರಾಜಾ ಅಜಿತಸಿಂಗ್‌ನ ಕಳಕಳಿಯ ವಿನಂತಿಯ ಮೇರೆಗೆ ಬಂದಿದ್ದರು. ೧೮೯೩ರ ಏಪ್ರಿಲ್ ೨೧ ರಾಜಕುಮಾರನ ಹುಟ್ಟುಹಬ್ಬದ ದಿನವಾಗಿತ್ತು. ಖೇತ್ರಿಯ 'ಪನ್ನಾತಾಲಾಬ' ಎಂಬ ಹೆಸರಿನ ಸರೋವರವನ್ನು ಸುಂದರವಾಗಿ ಅಲಂಕರಿಸಲಾಗಿತ್ತು. ರಾಜಾ ಅಜಿತ್‌ಸಿಂಗ್ ರಾಜಪರಿವಾರದೊಂದಿಗೆ ಅತ್ಯಂತ ಅಂದವಾಗಿ ಅಲಂ ಕರಿಸಿದ್ದ ನಾವೆಯಲ್ಲಿ ವಿರಾಜಮಾನವಾಗಿದ್ದನು. ಮೈನಾಬಾಯಿ ಕೂಡ ಭಾಮರೀಬಾಯಿ ಹಾಗೂ ಜಾನಕೀಬಾಯಿಯವರೊಂದಿಗೆ ನಾವೆಯಲ್ಲಿ ಭಜನೆಗಳನ್ನು ಹಾಡುತ್ತ ಕುಳಿತಿದ್ದರು. ಸ್ವಾಮೀಜಿಯವರ ಆಗಮನದ ವಾರ್ತೆಯನ್ನು ಕೇಳುತ್ತಿದ್ದಂತೆ ಅಜಿತಸಿಂಗ್ ನಾವೆಯಿಂದ ಇಳಿದುಬಂದು ಸ್ವಾಮೀಜಿಯವರನ್ನು ಸ್ವಾಗತಿಸಿದನು.

ಸ್ವಾಮೀಜಿಯವರ ಚಿಕಾಗೋ ಧರ್ಮಸಭೆಯ ದಿಗ್ವಿಜಯದ ನಂತರ ೧೮೯೭ನೆಯ ಡಿಸೆಂಬರ್‌ದಲ್ಲಿ ಮೂರನೆಯ ಬಾರಿ ಖೇತ್ರಿಗೆ ಆಗಮಿಸಿದರು. ಖೇತ್ರಿಯ ಜನ ಅತ್ಯಂತ ಉತ್ಸಾಹದಿಂದ ಸ್ವಾಮೀಜಿಯವರ ಉಪನ್ಯಾಸಗಳನ್ನು ಕೇಳಲು ಕಾತರರಾಗಿದ್ದರು. ಸರೋವರದ ಪಕ್ಕದಲ್ಲಿದ್ದ ಒಂದು ವಿಶಾಲವಾದ ಜಾಗದಲ್ಲಿ ಡಿಸೆಂಬರ್ ತಿಂಗಳ ಹನ್ನೆರಡನೆಯ ತಾರೀಖಿನಂದು ಸ್ವಾಮೀಜಿಯವರ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ರಾಜದರ್ಬಾರಿನ ಎಲ್ಲ ಕೆಲಸಗಾರರು, ರಾಜನ ಎಲ್ಲ ಬಂಧುಬಾಂಧವರು, ಖೇತ್ರಿಯ ವಿದ್ವಾಂಸರು, ಗಣ್ಯರೆಲ್ಲರೂ ಈ ಸಭೆಯಲ್ಲಿ ನೆರೆದಿದ್ದರು. ಮೈನಾಬಾಯಿಯ ಹಾಡುಗಳೊಂದಿಗೆ ಕಾರ್ಯಕ್ರಮ ಆರಂಭವಾಯಿತು. ರಾಜಾ ಅಜಿತಸಿಂಗ್‌ನೊಂದಿಗೆ ಸ್ವಾಮೀಜಿ ಕೂಡ ಸಂಗೀತವನ್ನು ಆನಂದಿಂದ ಆಲಿಸಿದರು.

ಸ್ವಾಮಿ ವಿವೇಕಾನಂದರನ್ನು ಭೇಟಿಮಾಡಿದ ನಂತರ ಮೈನಾಬಾಯಿಯ ಮನಸ್ಸಿನ ಸ್ಥಿತಿ ಸಂಪೂರ್ಣ ಬದಲಾಗಿತ್ತು. ಸ್ವಾಮೀಜಿ ಅವಳನ್ನು 'ಅಮ್ಮಾ' ಎಂದು ಸಂಬೋಧಿಸಿದ್ದನ್ನು ಅವಳು ತನ್ನ ಬದುಕಿನ ಅಂತಿಮ ಕ್ಷಣದವರೆಗೂ ನೆನಪಿನಲ್ಲಿಟ್ಟುಕೊಂಡಿದ್ದಳು. ಸ್ವಾಮೀಜಿಯ ಮೂರನೆಯ ಖೇತ್ರಿಯ ಭೇಟಿಯ ಸಮಯದಲ್ಲಿ ಅವಳು, 'ಹೇಗಾದರೂ ಮಾಡಿ ಸ್ವಾಮೀಜಿಯನ್ನು ಭೇಟಿಮಾಡುವ ಅವಕಾಶ ಕಲ್ಪಿಸಿಕೊಡಿ' ಎಂದು ರಾಜಾ ಅಜಿತ್‌ಸಿಂಗ್‌ನನ್ನು ಬೇಡಿಕೊಂಡಳು. ಸ್ವಾಮೀಜಿ ಅವಳ ಕೋರಿಕೆಗೆ ಸಮ್ಮತಿಸಿ ಮೈನಾಬಾಯಿ, ಭಾಮರೀಬಾಯಿ ಹಾಗೂ ಜಾನಕೀಬಾಯಿಯರನ್ನು ಭೇಟಿ ಮಾಡಿ, ಅವರನ್ನು ಆಶೀರ್ವದಿಸಿದರು. ಮೈನಾಬಾಯಿ ಗದ್ಗದಿತಳಾಗಿ ''ಸಾಧು ಮಹಾರಾಜ್, ನಮಗೆ ಎಂದಿಗೂ ಮುಕ್ತಿ ಲಭಿಸುವುದೇ ಇಲ್ಲವೆ?'' ಎಂದು ಪ್ರಶ್ನಿಸಿದಳು. ಆಗ ಸ್ವಾಮೀಜಿ ಅವರನ್ನು ಸಂತೈಸುತ್ತ, ''ಯಾವಾಗ ಶ್ರೀರಾಮಕೃಷ್ಣರು ಈ ಜಗತ್ತಿನಲ್ಲಿ ಅವತರಿಸಿ ಬಂದರೋ ಆಗಿನಿಂದ ಮುಕ್ತಿಯ ಪಥ ಎಲ್ಲರಿಗೂ ತೆರೆದುಕೊಂಡಿದೆ. ನೀವು ಕೇವಲ ಅವರನ್ನು ಸ್ಮರಿಸಿ, ಅವರನ್ನು ಕುರಿತಾಗಿಯೇ ಧ್ಯಾನಿಸಿ'' ಎಂದು ನುಡಿದರು. ಮೈನಾಬಾಯಿ ಮತ್ತೆ ಸ್ವಾಮೀಜಿಯವರಿಗೆ ''ಸಾಧೂಜೀ, ನಾವು ನಮ್ಮ ಮನಸ್ಸಿನಲ್ಲಿ ಏಳುವ ಸಂಶಯಗಳನ್ನು ಹಾಗೂ ದ್ವಂದ್ವಗಳನ್ನು ಹೇಗೆ ಕಿತ್ತುಹಾಕಬೇಕು?'' ಎಂದು ಮರುಪ್ರಶ್ನಿಸಿದಳು. ಸ್ವಾಮೀಜಿ ಉತ್ತರಿಸಿದರು, ''ತೀರ್ಥಯಾತ್ರೆ ಮಾಡಿ, ಅಲ್ಲಿರುವ ಅನಾಥರನ್ನು ಸಾಧ್ಯವಾದಷ್ಟು ಪೋಷಿಸಿರಿ. ಇದೊಂದನ್ನು ನೀವು ಪೂರೈಸಿದ್ದೇ ಆದಲ್ಲಿ ನಿಮಗೆ ಅನಂತ ಆನಂದ ಹಾಗೂ ಶಾಂತಿ ಲಭಿಸುತ್ತವೆ.''

*(ಮುಂದಿನ ಸಂಚಿಕೆಗೆ)*